<u>**ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.**</u>

ಸಿ.ಸಿ. ನಂಃ 420/2017 ಸಿಡಬ್ಲೂ: 4 ಪಿಡಬ್ಲೂ: 2

ಪ್ರಮಾಣವಚನ ಬೋಧಿಸಲಾಯಿತು ದಿಃ 26-12-2024

ಹೆಸರು : ಅನ್ನಪೂರ್ಣ

ಗಂಡನ ಹೆಸರು : ಅಶೋಕ

ವಯಸ್ಸು : 34 ವರ್ಷ

ಉದ್ಯೋಗ : ಕೂಲಿ ಕೆಲಸ

ವಾಸಸ್ಥಳ : ಬೆನಕನಳ್ಳಿ

**:ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ:**

ಚಾಸಾ-1 ನನ್ನ ತಾಯಿ. ಚಾಸಾ-5 ನನ್ನ ತಂದೆ. ಚಾಸಾ-6 ನನ್ನ ತಂಗಿ. ಆರೋಪಿತರು ನನ್ನ ಅಣ್ಣ-ತಮ್ಮಕಿಯವರು.

ಸುಮಾರು 7 ವರ್ಷಗಳ ಹಿಂದೆ ಬೆಳಗೆಗ 10.00ಗಂಟೆ ಸುಮಾರಿಗೆ ನಾನು ಮತ್ತು ಚಾಸಾ-1, 5, 6 ರವರು ತಮ್ಮ ಹಳೆ ಮನೆಯ ಗೋಡೆಯನ್ನು ಪುನಃ ಹೊಸದಾಗಿ ಕಟ್ಟಲು ಕೆಡುವುತ್ತಿದ್ದಾಗ ಆರೋಪಿತರು ಕೂಡಿಕೊಂಡು ಬಂದು ಅದರಲ್ಲಿ 1ನೇ ಆರೋಪಿತನು ಚಾಸಾ-1 ರವರಿಗೆ ಮನೆ ಏಕೆ ಕೆಡುವುತ್ತಿದ್ದಿರಿ ನಿಮಗೆ ಗಂಡು ಮಕ್ಕಳು ಇಲ್ಲ ಹಾಗೂ ಎ ಶಾಂತಿ ರಂಡೀ ನಿನಗೆ ಬಹಳ ಸೊಕ್ಕು ಬಂದಿದೆ ಅಂತಾ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ. ಆರೋಪಿತರು ಚಾಸಾ-1ರವರ ಮೊಳ ಕಾಲಿಗೆ ಹೊಡೆ-ಬಡೆ ಮಾಡಿ ರಕ್ತಗಾಯಪಡಿಸಿರುತ್ತಾರೆ ಹಾಗೂ ನನಗೆ ಹೊಟ್ಟೆಗೆ ಒದ್ದಿರುತ್ತಾರೆ. ನಂತರ ಚಾಸಾ-4 ರಿಂದ 6 ರವರು ಜಗಳ ಬಿಡಿಸಿರುತ್ತಾರೆ. ಆರೋಪಿತರು ಜಗಳ ಬಿಟ್ಟು ಹೋಗುತ್ತಿರುವಾಗ ಜೀವ ಬೆದರಿಕೆ ಹಾಕಿರುತ್ತಾರೆ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲಿಗೆ ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಯಿತು)**

<u>**ಪಾಟೀಸವಾಲುಃ**</u> ಮಾನ್ಯ ಸ.ಸ.ಅ ರವರಿಂದ ಃ

ದಿನಾಂಕ 02.03.2017 ಬೆಳಗ್ಗೆ 10.00ಗಂಟೆ ಸುಮಾರಿಗೆ ಸದರಿ ಜಗಳ ಆಗಿರುತ್ತದೆ ಎಂದರೆ ಸರಿ. ಆರೋಪಿತರು ಚಾಸಾ-1 ರವರಿಗೆ ಬಡಿಗೆಯಿಂದ ಬಲಗಾಲಿನ ಮೊಳಕಾಲಿಗೆ, ಟೊಂಕಕ್ಕೆ, ಎಡಗೈಗೆ ಹಾಗೂ ಮುಂಗೈದು ಹೊಡೆದು ಗುಪ್ತಗಾಯಪಡಿಸಿರುತ್ತಾರೆ ಎಂದರೆ ಸರಿ. ಜಗಳ ಬಿಟ್ಟು ಹೋಗುತ್ತಿರುವಾಗ 1ನೇ ಆರೋಪಿತನು ಚಾಸಾ-1 ರವರ ಸೀರೆ ಸೆರಗನ್ನು ಹಿಡಿದು ಎಳೆದಾಡಿ ಅವಳ ಮಾನಕ್ಕೆ ಕಂದುಬರುವ ರೀತಿಯಲ್ಲಿ ನಡೆದುಕೊಂಡಿರುತ್ತಾರೆ ಹಾಗೂ ಜೀವ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ. ಸಾಕ್ಷಿಗೆ ಒಂದು ಬಡಿಗೆಯನ್ನು ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ

ಗುರುತಿಸಿದ್ದು, ಅದನ್ನು ಈಗಾಗಲೇ ಮ.ಮಾ.1 ಎಂದು ಗುರುತಿಸಲಾಗಿದೆ. ಹಾಗೂ ಸಾಕ್ಷಿಯು ಇದೆ ಬಡಿಗೆಯಿಂದ ಹೊಡೆದಿರುವುದಾಗಿ ನುಡಿಯುತ್ತಾರೆ.

**ಪಾಟೀ ಸವಾಲುಃ ಶ್ರೀ ಎನ್. ಎಮ್. ಆರೋಪಿತರ ಪರ ವಕೀಲರಿಂದ**

ನಮ್ಮ ಮನೆ ಜಾಗ ಖರೀದಿ ಮಾಡಿರುತ್ತೇವೆ ಎಂದರೆ ಸರಿ. ಸದರಿ ಖರೀದಿ ಮಾಡಿದ ಜಾಗ ಆರೋಪಿತರ ಮನೆಯ ಪಕ್ಕ ಇರುತ್ತದೆ ಎಂದರೆ ಸರಿ. ಎರಡು ಮನೆಯ ನಡುವೆ ಸಾಮೋಹಿಕ ಗೋಡೆ ಇರುತ್ತದೆ ಎಂದರೆ ಸರಿ. ನಾವು ಸದರಿ ಜಾಗವನ್ನು ಖರೀದಿ ಮಾುಡುವುದಕ್ಕಿಂತ ಮೊದಲು ಆರೋಪಿತರು ಹಾಗೂ ನಾವು ಸೇರಿ ಅರ್ಧ ಅರ್ಧ ತಗೆದುಕೊಬೇಕು ಎಂದು ಮಾತುಕತೆ ಆಗಿರುತ್ತದೆ. ನಂತರ ಆರೋಪಿತರಿಗೆ ಗೊತ್ತಿಲ್ಲದೆ ಸದರಿ ಜಾಗವನ್ನು ನಾವು ಖರೀದಿ ಮಾಡಿರುತ್ತೇವೆ. ನಂತರ ಆರೋಪಿತರು ಬಂದು ನಾವಿಬ್ಬರೂ ತಗೋಬೇಕು ಅಂತಾ ಮಾತುಕತೆ ಆಗಿರುತ್ತದೆ ಆದರೆ ನೀವು ಒಬ್ಬರೆ ತೆಗೆದೊಂಡಿರುತ್ತಿರಿ ಎಂದು ಕೇಳಿರುತ್ತಾರೆ ಎಂದರೆ ಸರಿ. ಸದರಿ ಜಾಗದ ಸಂಬಂಧಿಸಿದ ವಿವಾದವನ್ನು ಮಾಡಬಾರದು ಅಂತಾ ಈ ಸುಳ್ಳು ಪ್ರಕರಣವನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. 3ನೇ ಆರೋಪಿಗೆ ಹುಟ್ಟಿನಿಂದಲೇ ಕೇಳಲು ಮಾತನಾಡಲು ಬರುವುದಿಲ್ಲ ಎಂದರೆ ಸರಿ. 3ನೇ ಆರೋಪಿತನು ನನಗೆ ಕುತ್ತಿಗೆಗೆ ಹಿಡಿದು ಹೊಡೆ-ಬಡೆ ಮಾಡಿರುತ್ತಾನೆ. ಈ ಬಗ್ಗೆ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಜಗಳ ಖಂಡೆಪ್ಪ ಎನ್ನುವವರು ಬೇರೆ ಊರಿನವರು ಬಿಡಿಸಿರುತ್ತಾರೆ. ಸಾಕ್ಷಿ ಮುಂದುವರೆದು ಬೇರೆ ಯಾರು ಇದ್ದರೂ ನನಗೆ ಗೊತ್ತಿಲ್ಲ. ಜಗಳ ಆದ ನಂತರ ನಾನು ನೇರವಾಗಿ ಪೊಲೀಸ ಠಾಣೆಗೆ ಹೋಗಿದ್ದು ನಂತರ ಆಸಪತ್ರೆಗೆ ಹೋಗಿದ್ದೇವು. ಮು.ಮಾ.1 ಬಡಿಗೆ ಸಾಮಾನ್ಯವಾಗಿ ಎಲ್ಲ ಕಡೆ ಲಭ್ಯವಿರುತ್ತವೆ ಎಂದರೆ ಸರಿ. ನಾನು ಈ ಬಗ್ಗೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಿನಾಂಕ 02.03.2017 ಬೆಳಗ್ಗೆ 10.00ಗಂಟೆ ಸುಮಾರಿಗೆ ಸದರಿ ಜಗಳ ಆಗಿರುತ್ತದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಚಾಸಾ-1 ರವರಿಗೆ ಬಡಿಗೆಯಿಂದ ಬಲಗಾಲಿನ ಮೊಳಕಾಲಿಗೆ, ಟೊಂಕಕ್ಕೆ, ಎಡಗೈಗೆ ಹಾಗೂ ಮುಂಗೈದು ಹೊಡೆದು ಗುಪ್ತಗಾಯಪಡಿಸಿರುತ್ತಾರೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಜಗಳ ಬಿಟ್ಟು ಹೋಗುತ್ತಿರುವಾಗ 1ನೇ ಆರೋಪಿತನು ಚಾಸಾ-1 ರವರ ಸೀರೆ ಸೆರಗನ್ನು ಹಿಡಿದು ಎಳೆದಾಡಿ ಅವಳ ಮಾನಕ್ಕೆ ಕಂದುಬರುವ ರೀತಿಯಲ್ಲಿ ನಡೆದುಕೊಂಡಿರುತ್ತಾರೆ ಹಾಗೂ ಜೀವ ಬೆದರಿಕೆ ಹಾಕಿರುತ್ತಾರೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮು.ಮಾ.ಗೂ ಆರೋಪಿತರಿಗೂ ಯಾವುದೇ ಸಂಬಂಧ ಇರದೇ ಇದ್ದರೂ ಸಹ ಅವರ ವಿರುದ್ದ ಸುಳ್ಳು ಪ್ರಕರಣವನ್ನು ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ. ಇದೆ.**

**ಪ್ರ. ದ. ನ್ಯಾ. ದಂ. ಸೇಡಂ.**

# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.

ಸಿ.ಸಿ. ನಂಃ 420/2017 ಸಿಡಬ್ಲೂ: 6 ಪಿಡಬ್ಲೂ: 3

ಪ್ರಮಾಣವಚನ ಬೋಧಿಸಲಾಯಿತು ದಿಃ 26-12-2024

ಹೆಸರು : ಸಿಮೇನ

ತಂದೆ ಹೆಸರು : ನರಸಪ್ಪ

ವಯಸ್ಸು : 57 ವರ್ಷ

ಉದ್ಯೋಗ : ಕೂಲಿ ಕೆಲಸ

ವಾಸಸ್ಥಳ : ಬೆನಕನಳ್ಳಿ

**:ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ:**

ಚಾಸಾ-1 ನನ್ನ ಹೆಂಡತಿ. ಚಾಸಾ-4 ಮತ್ತು 6 ನನ್ನ ಮಕ್ಕಳು. ಆರೋಪಿತರು ನನ್ನ ಅಣ್ಣ-ತಮ್ಮಕಿಯವರು.

ಸುಮಾರು 7 ವರ್ಷಗಳ ಹಿಂದೆ ಬೆಳಗೆಗ 10.00ಗಂಟೆ ಸುಮಾರಿಗೆ ನಾನು ಮತ್ತು ಚಾಸಾ-1, 4, 6 ರವರು ತಮ್ಮ ಹಳೆ ಮನೆಯ ಗೋಡೆಯನ್ನು ಪುನಃ ಹೊಸದಾಗಿ ಕಟ್ಟಲು ಕೆಡುವುತ್ತಿದ್ದಾಗ ಆರೋಪಿತರು ಕೂಡಿಕೊಂಡು ಬಂದು ಅದರಲ್ಲಿ 1ನೇ ಆರೋಪಿತನು ಚಾಸಾ-1 ರವರಿಗೆ ಮನೆ ಏಕೆ ಕೆಡುವುತ್ತಿದ್ದಿರಿ ನಿಮಗೆ ಗಂಡು ಮಕ್ಕಳು ಇಲ್ಲ ಹಾಗೂ ಎ ಶಾಂತಿ ರಂಡೀ ನಿನಗೆ ಬಹಳ ಸೊಕ್ಕು ಬಂದಿದೆ ಅಂತಾ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ. ಆರೋಪಿತರು ಚಾಸಾ-1ರವರ ಮೊಳ ಕಾಲಿಗೆ ಹೊಡೆ-ಬಡೆ ಮಾಡಿ ರಕ್ತಗಾಯಪಡಿಸಿರುತ್ತಾರೆ ಹಾಗೂ ನನಗೆ ಹೊಟ್ಟೆಗೆ ಒದ್ದಿರುತ್ತಾರೆ. ಆರೋಪಿತರು ಜಗಳ ಬಿಟ್ಟು ಹೋಗುತ್ತಿರುವಾಗ ಜೀವ ಬೆದರಿಕೆ ಹಾಕಿರುತ್ತಾರೆ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲಿಗೆ ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಯಿತು)**

**ಪಾಟೀಸವಾಲುಃ** ಮಾನ್ಯ ಸ.ಸ.ಅ ರವರಿಂದ ಃ

ದಿನಾಂಕ 02.03.2017 ಬೆಳಗ್ಗೆ 10.00ಗಂಟೆ ಸುಮಾರಿಗೆ ಸದರಿ ಜಗಳ ಆಗಿರುತ್ತದೆ ಎಂದರೆ ಸರಿ. ಆರೋಪಿತರು ಚಾಸಾ-1 ರವರಿಗೆ ಬಡಿಗೆಯಿಂದ ಬಲಗಾಲಿನ ಮೊಳಕಾಲಿಗೆ, ಟೊಂಕಕ್ಕೆ, ಎಡಗೈಗೆ ಹಾಗೂ ಮುಂಗೈದು ಹೊಡೆದು ಗುಪ್ತಗಾಯಪಡಿಸಿರುತ್ತಾರೆ ಎಂದರೆ ಸರಿ. ಜಗಳ ಬಿಟ್ಟು ಹೋಗುತ್ತಿರುವಾಗ 1ನೇ ಆರೋಪಿತನು ಚಾಸಾ-1 ರವರ ಸೀರೆ ಸೆರಗನ್ನು ಹಿಡಿದು ಎಳೆದಾಡಿ ಅವಳ ಮಾನಕ್ಕೆ ಕಂದುಬರುವ ರೀತಿಯಲ್ಲಿ ನಡೆದುಕೊಂಡಿರುತ್ತಾರೆ ಹಾಗೂ ಜೀವ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ. ಸಾಕ್ಷಿಗೆ ಒಂದು ಬಡಿಗೆಯನ್ನು ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಮ.ಮಾ.1 ಎಂದು ಗುರುತಿಸಲಾಗಿದೆ. ಹಾಗೂ ಸಾಕ್ಷಿಯು ಇದೆ ಬಡಿಗೆಯಿಂದ ಹೊಡೆದಿರುವುದಾಗಿ ನುಡಿಯುತ್ತಾರೆ.

**ಪಾಟೀ ಸವಾಲುಃ ಶ್ರೀ ಎನ್. ಎಮ್. ಆರೋಪಿತರ ಪರ ವಕೀಲರಿಂದ**

ನಾನು ಎಲ್ಲಾ ಊರ ಮಂದಿಯ ದನಗಳನ್ನು ಕಾಯುವ ಕೆಲಸ ಮಾಡುತ್ತೇನೆ ಎಂದರೆ ಸರಿ. ನಾನು ದಿನಾಲೂ ದನಗಳನ್ನು ಕಾಯಲು ಬೆಳಗ್ಗೆ 09.00 ರಿಂದ 10.00ಗಂಟೆ ಅವಧಿಯಲ್ಲಿ ಹೋಗುತ್ತೇನೆ ಹಾಗೂ ಸಂಜೆ

05.00ಗಂಟೆಗೆ ಮರಳಿ ಮನೆಗೆ ಬರುತ್ತೇನೆ. ನಮ್ಮ ಮನೆ ಜಾಗ ಖರೀದಿ ಮಾಡಿರುತ್ತೇವೆ ಎಂದರೆ ಸರಿ. ಸದರಿ ಖರೀದಿ ಮಾಡಿದ ಜಾಗ ಆರೋಪಿತರ ಮನೆಯ ಪಕ್ಕ ಇರುತ್ತದೆ ಎಂದರೆ ಸರಿ. ಎರಡು ಮನೆಯ ನಡುವೆ ಸಾಮೋಹಿಕ ಗೋಡೆ ಇರುತ್ತದೆ ಎಂದರೆ ಸರಿ. ನಾವು ಸದರಿ ಜಾಗವನ್ನು ಖರೀದಿ ಮಾಡುವುದಕ್ಕಿಂತ ಮೊದಲು ಆರೋಪಿತರು ಹಾಗೂ ನಾವು ಸೇರಿ ಅರ್ಧ ಅರ್ಧ ತಗೆದುಕೊಬೇಕು ಎಂದು ಮಾತುಕತೆ ಆಗಿರುತ್ತದೆ. ನಂತರ ಆರೋಪಿತರಿಗೆ ಗೊತ್ತಿಲ್ಲದೆ ಸದರಿ ಜಾಗವನ್ನು ನಾವು ಖರೀದಿ ಮಾಡಿರುತ್ತೇವೆ. ನಂತರ ಆರೋಪಿತರು ಬಂದು ನಾವಿಬ್ಬರೂ ತಗೋಬೇಕು ಅಂತಾ ಮಾತುಕತೆ ಆಗಿರುತ್ತದೆ ಆದರೆ ನೀವು ಒಬ್ಬರೆ ತೆಗೆದೊಂಡಿರುತ್ತಿರಿ ಎಂದು ಕೇಳಿರುತ್ತಾರೆ ಎಂದರೆ ಸರಿ. ಸದರಿ ಜಾಗದ ಸಂಬಂಧಿಸಿದ ವಿವಾದವನ್ನು ಮಾಡಬಾರದು ಅಂತಾ ಈ ಸುಳ್ಳು ಪ್ರಕರಣವನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. 3ನೇ ಆರೋಪಿಗೆ ಹುಟ್ಟಿನಿಂದಲೇ ಕೇಳಲು ಮಾತನಾಡಲು ಬರುವುದಿಲ್ಲ ಎಂದರೆ ಸರಿ. 3ನೇ ಆರೋಪಿತನು ನನಗೆ ಕುತ್ತಿಗೆಗೆ ಹಿಡಿದು ಹೊಡೆ-ಬಡೆ ಮಾಡಿರುತ್ತಾನೆ. ಈ ಬಗ್ಗೆ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಜಗಳ ಖಂಡೆಪ್ಪ ಎನ್ನುವವರು ಬೇರೆ ಊರಿನವರು ಬಿಡಿಸಿರುತ್ತಾರೆ. ಸಾಕ್ಷಿ ಮುಂದುವರೆದು ಬೇರೆ ಯಾರು ಇದ್ದರೂ ನನಗೆ ಗೊತ್ತಿಲ್ಲ. ಜಗಳ ಆದ ನಂತರ ನಾನು ನೇರವಾಗಿ ಪೊಲೀಸ ಠಾಣೆಗೆ ಹೋಗಿದ್ದು ನಂತರ ಆಸಪತ್ರೆಗೆ ಹೋಗಿದ್ದೇವು. ಮು.ಮಾ.1 ಬಡಿಗೆ ಸಾಮಾನ್ಯವಾಗಿ ಎಲ್ಲ ಕಡೆ ಲಭ್ಯವಿರುತ್ತವೆ ಎಂದರೆ ಸರಿ. ನಾನು ಈ ಬಗ್ಗೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಿನಾಂಕ 02.03.2017 ಬೆಳಗ್ಗೆ 10.00ಗಂಟೆ ಸುಮಾರಿಗೆ ಸದರಿ ಜಗಳ ಆಗಿರುತ್ತದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಚಾಸಾ-1 ರವರಿಗೆ ಬಡಿಗೆಯಿಂದ ಬಲಗಾಲಿನ ಮೊಳಕಾಲಿಗೆ, ಟೊಂಕಕ್ಕೆ, ಎಡಗೈಗೆ ಹಾಗೂ ಮುಂಗೈದು ಹೊಡೆದು ಗುಪ್ತಗಾಯಪಡಿಸಿರುತ್ತಾರೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಜಗಳ ಬಿಟ್ಟು ಹೋಗುತ್ತಿರುವಾಗ 1ನೇ ಆರೋಪಿತನು ಚಾಸಾ-1 ರವರ ಸೀರೆ ಸೆರಗನ್ನು ಹಿಡಿದು ಎಳೆದಾಡಿ ಅವಳ ಮಾನಕ್ಕೆ ಕಂದುಬರುವ ರೀತಿಯಲ್ಲಿ ನಡೆದುಕೊಂಡಿರುತ್ತಾರೆ ಹಾಗೂ ಜೀವ ಬೆದರಿಕೆ ಹಾಕಿರುತ್ತಾರೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮು.ಮಾ.ಗೂ ಆರೋಪಿತರಿಗೂ ಯಾವುದೇ ಸಂಬಂಧ ಇರದೇ ಇದ್ದರೂ ಸಹ ಅವರ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಜಗಳ ಆಗಿರುವ ದಿನದಂದು ನಾನು ಮನೆಯಲ್ಲಿ ಇರಲಿಲ್ಲ, ನಾನು ಸುಳ್ಳು ಪ್ರಕರಣವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ. ಇದೆ.**

**ಪ್ರ. ದ. ನ್ಯಾ. ದಂ. ಸೇಡಂ.**

**Case called out**
**Accused present.**
**CW4 and 6 present and examined as PW1 and 2 and got marked Ex.P.1 and 2.**
**the Ld.APP prays to issue W/s to other witnesses. The prayer of the ld. APP rejected as the material witnesses of the present case are turned hostile and therefore other witnesses are dropped.**

**The statement of accused U/sec.313 of Cr.P.C. is hereby dispensed with as there no incriminating evidence against them. Hence for compliance. Call on 30.12.2024.**